# ಶ್ರೀಮಾತೆಯವರ ಪತ್ರಗಳು - ೧೬

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

### ಪತ್ರ - ೮೭

೨೧.೪.೧೯೧೩

೬ನೇ ವೈಶಾಖ, ಜಯರಾಂಬಾಟಿ

ಶುಭವಾಗಲಿ,

ತಾಯಿ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ಇಲ್ಲಿ ನಾವೆಲ್ಲರೂ ಸದ್ಯ ಚೆನ್ನಾಗಿದ್ದೇವೆ. ೨೬ನೇ ವೈಶಾಖ ಅಕ್ಷಯ ತೃತೀಯ ದಿನದಂದು ರಾಧುವನ್ನು ತಾಜ್‌ಪುರ್‌ಗೆ ಕಳುಹಿಸುವ ಇಚ್ಛೆ ಇದೆ. ಮಾಕುವೂ ತಾಜ್‌ಪುರ್‌ಗೆ ಹೋಗಿದ್ದಾಳೆ. ನಿನಗೆ ನನ್ನ ಆಶೀರ್ವಾದ, ಕ್ಷೇಮದಲ್ಲಿರುವೆ ಎಂದು ಆಶಿಸುತ್ತೇನೆ.

ಇತಿ ಆಶೀರ್ವಾದ ನೀಡುತ್ತಿರುವ

ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಮತಿ ಸರಯೂಬಾಲಾ ದೇವಿ*

*C/O Dr.G.C.Sen*

*P.O. Meherpur , Dt. Nadia*

### ಪತ್ರ - ೮೮

೨.೫.೧೯೧೩

೧೯ನೇ ವೈಶಾಖ, ಜಯರಾಂಬಾಟಿ

ಮಂಗಳವಾಗಲಿ,

ತಾಯಿ, ನಿನ್ನ ಪತ್ರವು ಸಿಕ್ಕಿದೆ. ಸದ್ಯ ಇಲ್ಲಿ ಎಲ್ಲವೂ ಕ್ಷೇಮ. ಈ ತಿಂಗಳು ೨೪ನೇ ತಾರೀಖಿಗೆ ಭೂದೇವನ ವಿವಾಹ ನಡೆಯಲಿದೆ. ನಿಮಗೆಲ್ಲರಿಗೂ ನನ್ನ ಆಶೀರ್ವಾದ.

ಇತಿ ಆಶೀರ್ವಾದ ನೀಡುತ್ತಿರುವ

ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಶ್ರೀಮತಿ ಸರಯೂಬಾಲಾ ದೇವಿ*

*C/O Dr. G.C. Sen*

*P.O.Meherpur, Dt.Nadia*

### ಪತ್ರ - ೮೯

೭.೫.೧೯೧೩

೨೪ನೇ ವೈಶಾಖ, ಜಯರಾಂಬಾಟಿ

ಶುಭವಾಗಲಿ,

ಮಗನೆ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ಸದ್ಯ ನಾನು ಚೆನ್ನಾಗಿದ್ದೇನೆ. ಶ್ರೀ ಶ್ರೀ ಠಾಕೂರರನ್ನು ಕರೆಯಬೇಕು. ಅವರ ಕೃಪೆಯಿಂದ ಕ್ರಮೇಣ ಮನಸ್ಸು ಶುದ್ಧಿಯಾಗುವುದು. ತಕ್ಷಣ ಏನಾದರೂ ಆಗುವುದೆ! ಎಷ್ಟೊಂದು ಋಷಿ ಮುನಿಗಳು ಜೀವನ ಪೂರ್ತಿ ಸಾಧನೆ - ತಪಸ್ಸು ಮಾಡುವರು, ಅವರ ಮನಸ್ಸೂ ಕೆಲವು ಸಂಧರ್ಭಗಳಲ್ಲಿ ಸಡಿಲವಾಗಿ ಕೆಳಗಿಳಿಯುವುದು! ಆದುದರಿಂದ ಸಾಧನೆ ಮಾಡಬೇಕು. ಯಾರು ಎಷ್ಟು ಭಗವಂತನ ಸಾಧನೆ ಮಾಡುವರೋ ಅವರು ಅಷ್ಟೇ ಶೀಘ್ರವಾಗಿ ಶುದ್ಧ ವಸ್ತು ವನ್ನು ಪಡೆಯುವರು. ವ್ಯಾಕುಲದಿಂದ ಅತ್ತರೆ ಮಾತ್ರ ತಾನೇ, ಮನಸ್ಸು ಚೆನ್ನಾಗಾಗುವುದು? ಶ್ರೀ ಠಾಕೂರರ ಕೃಪೆಗೆ ಪಾತ್ರರಾಗಲು ಎಲ್ಲರೂ ಸಮಾನರು! ಸಾಧನೆ ಬೇಕು.

ನಿನಗೆ ನನ್ನ ಆಶೀರ್ವಾದ.

ಇತಿ ಆಶೀರ್ವಾದ ನೀಡುತ್ತಿರುವ

ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*Sriman Nishi Kumar Ganguly*

*Ibrahimpur (Tipprah )*

### ಪತ್ರ - ೯೦

೧೩.೫.೧೯೧೩

೨೮ನೇ ವೈಶಾಖ, ಜಯರಾಂಬಾಟಿ

ಮಂಗಳವಾಗಲಿ,

ತಾಯಿ, ನಿನ್ನ ಪತ್ರ ಹಾಗೂ ಕಳುಹಿಸಿರುವ ೫ ರೂಪಾಯಿ ಸಿಕ್ಕಿ ಸಂತೋಷವಾಯಿತು. ಇಲ್ಲಿ ನಾವೆಲ್ಲರೂ ಚೆನ್ನಾಗಿದ್ದೇವೆ. ೨೪ನೇ ವೈಶಾಖದಂದು ಭೂದೇವನ ವಿವಾಹ ನಡೆಯಿತು. ಮತ್ತು ೨೬ನೇ ತಾರೀಖಿಗೆ ರಾಧು ಮಾವನ ಮನೆಗೆ ಹೋಗಿದ್ದಾಳೆ. ನಿನಗೆ ನನ್ನ ಆಶೀರ್ವಾದಗಳು. ಎರಡು ದಿನಗಳ ಹಿಂದೆ ಶೋಕ ಹರಣ ಕಳುಹಿಸಿರುವ ೫ ರೂಪಾಯಿ ಸಿಕ್ಕಿತು. ಅವನಿಗೆ ನನ್ನ ಆಶೀರ್ವಾದ ತಿಳಿಸು ಮತ್ತು ಇಲ್ಲಿ ಎಲ್ಲವೂ ಕ್ಷೇಮವೆಂದು ಹೇಳು.

ಇತಿ ಆಶೀರ್ವಾದ ನೀಡುತ್ತಿರುವ

ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***

*ಸರಯೂಬಾಲಾ ದೇವಿ*

*25 kankulia Road, Calcatta*

*Note:* ಶೋಕಹರಣ ಶ್ರೀಮಾತೆಯವರ ಮಂತ್ರ ಶಿಷ್ಯ. ಹಾಗೂ ಸರಯೂಬಾಲಾ ದೇವಿಯವರ ಸಹೋದರಿಯ ಪತಿ.

**ಪತ್ರ – ೯೧**

೨೪.೫.೧೯೧೩
೧೧ನೇ ಜ್ಯೇಷ್ಠ, ಜಯರಾಂಬಾಟಿ

ಮಂಗಳವಾಗಲಿ,

ತಾಯಿ, ನಿನ್ನ ಪತ್ರವು ಸಿಕ್ಕಿ ಸಂತೋಷವಾಯಿತು. ರಾಧು ಕಾಯಿಲೆ ಇಟ್ಟು ಕೊಂಡೇ ನಿಶ್ಚಿತವಾದ ದಿನದಂತೆ ತಾಜ್‍ಪುರ್‌ಗೆ ಹೋಗಿದ್ದಳು. ಅಲ್ಲಿ ಕಾಯಿಲೆ ಜಾಸ್ತಿಯಾಗಿ ಮೂರು ದಿನಗಳ ನಂತರ ಮರಳಿ ಬಂದಳು. ಆಮೇಲೆ ೧೪, ೧೫ ದಿನಗಳು ಜ್ವರ, ಎದೆ, ಹೊಟ್ಟೆ ನೋವು, ಒಂದು ಹುಣ್ಣು ಆಗಿ ಅದರ ನೋವು ಎಲ್ಲಾ ಆಗಿ, ಈಗ ಸದ್ಯ ಸ್ವಲ್ಪ ಚೆನ್ನಾಗಿದ್ದಾಳೆ. ಈಗಲೂ ಸ್ವಲ್ಪ ಸ್ವಲ್ಪ ಜ್ವರ ಬರುತ್ತಿದೆ. ೨, ೩ ದಿನಗಳ ಅಂತರದಲ್ಲಿ ಅನ್ನ ಕೊಡುತ್ತಿರುವುದು. ತುಂಬಾ ದುರ್ಬಲಳಾಗಿದ್ದಾಳೆ. ಉಳಿದಂತೆ ಎಲ್ಲವೂ ಕುಶಲ. ನಾನು ಸ್ವಲ್ಪ ಮಟ್ಟಿಗೆ ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ. ಮಳೆಗಾಲದಲ್ಲಿ ಮಲೇರಿಯಾ ನಾಡಿನಲ್ಲಿ ವಾಸ ಮಾಡದಿರುವುದು ಒಳ್ಳೆಯದು, ವಿಶೇಷವಾಗಿ ಅಲ್ಲಿ ವಾಸ ಮಾಡಿ ಅಭ್ಯಾಸ ಇಲ್ಲದಿರುವವರು.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ಮಾತೆ

ಸುರೇಂದ್ರನಿಗೆ ಹೇಳು, ರಾಮದಾಸನ ಬಳಿ ಹೋಗುವ ಆವಶ್ಯಕತೆ ಇಲ್ಲ. ಅಮಲ್ ಮನೆಗೆ ಬಂದಿದ್ದಾನೆ.

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಶ್ರೀಮತಿ ಸರಯೂ ಬಾಲಾ ದೇವಿ*
*25 Kankulia Road ,Ballyganje , Calcatta*

**ಪತ್ರ – ೯೨**

ಶ್ರೀ ಗುರು ಶರಣಂ

೫ .೬ .೧೯೧೩
ಜಯರಾಂ ಬಾಟಿ, ೨೧ನೇ ಜ್ಯೇಷ್ಠ

ಶುಭವಾಗಲಿ,

ತಾಯಿ ನಿನ್ನ ಪತ್ರವು ಸಿಕ್ಕಿದೆ.

ರಾಧುವಿಗೆ ಈಗಲೂ ಮಧ್ಯೆ ಮಧ್ಯೆ ಸ್ವಲ್ಪ ನೋವು ಬರುತ್ತಿದೆ. ಬೇರೆ ಎಲ್ಲಾ ಕ್ಷೇಮ. ಇಂದಿಗೆ ೫, ೬ ದಿನಗಳಿಂದ ನನಗೆ ನೆಗಡಿಯಾಗಿದೆ. ಅದಲ್ಲದೆ ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ. ನಿನ್ನ ಕ್ಷೇಮದ ಬಗ್ಗೆ ಬರೆದು ಸಮಾಧಾನ ಕೊಡಬೇಕು.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಶ್ರೀಮತಿ ಸರಯೂ ಬಾಲಾ ದೇವಿ*
*25, Kankulia Road*
*Ballyganje, Calcatta*

**ಪತ್ರ – ೯೩**

೧೫.೬.೧೯೧೩
೨೦ನೇ ಜ್ಯೇಷ್ಠ

ಶುಭವಾಗಲಿ,

ಮಗೂ, ನೀನು ಕಳುಹಿಸಿರುವ ೧೦ ರೂಪಾಯಿ ಸಿಕ್ಕಿ ಸಂತೋಷವಾಯಿತು. ನಿನಗೆ ನನ್ನ ಆಶೀರ್ವಾದ ಹಾಗೂ ಸೊಸೆ ಮತ್ತು ಮಕ್ಕಳಿಗೂ ತಿಳಿಸು. ನಾನು ಸದ್ಯ ಚೆನ್ನಾಗಿದ್ದೇನೆ. ನೀವೆಲ್ಲರೂ ಚೆನ್ನಾಗಿದ್ದೀರೆಂದು ಆಶಿಸುತ್ತೇನೆ.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ಮಾತೆ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*Sj.Taraknath Roy Chowdhury*
*SubRegistrar, Kathiadi*
*Mymensingh*

**ಪತ್ರ – ೯೪**

೧೫.೬.೧೯೧೩
೩೦.೨.೨೦ (ಬಂಗಾಳಿ ತಾರೀಖು)
ಜಯರಾಂಬಾಟಿ

ಮಂಗಳವಾಗಲಿ,

ತಾಯಿ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ಸದ್ಯ ನನ್ನ ನೆಗಡಿ ಕಡಿಮೆಯಾಗಿದೆ. ಕಿವಿಯಲ್ಲಿ ಈಗಲೂ ಸ್ವಲ್ಪ ಭಾರವೆನಿಸುತ್ತಿದೆ. ರಾಧುವಿಗೆ ೨,೩ ದಿನಗಳ ಅಂತರದಲ್ಲಿ ಸಾಮಾನ್ಯವಾಗಿ ನೋವು ಬರುತ್ತಿದೆ. ಈ ಸಲವಂತೂ ಬಂದು ಬಹುದಿನಗಳಿಂದ ಕಷ್ಟ ಪಡುತ್ತಿದ್ದಾಳೆ. ಠಾಕೂರ್ ಹೇಗೆ ನಡೆಸುತ್ತಾರೋ ಹಾಗೆಯೇ ನಡೆಯುವುದು. ನಿನಗೆ ನನ್ನ ಆಶೀರ್ವಾದ. ಶೋಕಹರಣನಿಗೆ ನನ್ನ ಆಶೀರ್ವಾದ ತಿಳಿಸು. ಅವನು ಕಳುಹಿಸಿರುವ ೫ ರೂಪಾಯಿ ಸಿಕ್ಕಿದೆ ಎಂದು ಹೇಳು.

ಈ ಊರಲ್ಲೂ ಎಡೆಬಿಡದೆ ಮಳೆ ಸುರಿಯುತ್ತಿದೆ, ಶ್ರಾವಣ – ಭಾದ್ರಪದ ತಿಂಗಳುಗಳಂತೆ. ಊರಿನ ಸ್ಥಿತಿ ಪರವಾಗಿಲ್ಲ. ಮಲೇರಿಯಾ ಈಗಲೂ ಕಾಣಿಸಿಕೊಂಡಿಲ್ಲ. ಮನೆಯಲ್ಲಿ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಕ್ಷೇಮಕ್ಕಾಗಿ ಪ್ರಾರ್ಥನೆ.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ಮಾತೆ

***ಪತ್ರ ಪಡೆದವರ ಹೆಸರು***
*ಸರಯೂಬಾಲಾ ದೇವಿ*